


## ವಿವಾಹದ ಲೇಖನ ಪ್ರಸ್ತುತ

ಮದುವೆಗಳೇಕೆ ಮುರಿದು ಬೀಳುತ್ತವೆ? (ರಾಜಲಕ್ಷ್ಮಿ ಅಂಕಲಗಿ), ವಿವಾಹ ಹೆಣ್ಣಿಗೆ ಅದೆಷ್ಟು ಸುರಕ್ಷಿತ? (ಡಾ.ಎಚ್.ಗಿರಿಜಮ್ಮ) ಮುಖಪುಟ ಲೇಖನಗಳು ಪ್ರಸ್ತುತವಾಗಿವೆ. ವಿಷಮ ದಾಂಪತ್ಯದ ಹಲವು ಆಯಾಮಗಳನ್ನು ಚರ್ಚಿಸಿವೆ.

–ಸು.ವಿಜಯಲಕ್ಷ್ಮಿ, ಪಿ.ಗೋವಿಂದರಾಜ್, ಶಿವಮೊಗ್ಗ/ ವಿಭಾ ಮುರಳೀಧರ್, ತುಮಕೂರು/ ವನಜ, ಕಾರ್ಕಳ/ ಬಿ.ಎಸ್. ಮುಳ್ಳೂರ, ಹಲಗತ್ತಿ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

## ಗಂಡಿನ ಶೋಷಣೆ ಕೇಳುವವರಾರು?

ಹೆಣ್ಣಿನ ಶೋಷಣೆಯ ಬಗ್ಗೆ ಪತ್ರಿಕೆಗಳು ಸ್ಪರ್ಧೆಗೆ ಬಿದ್ದಂತೆ ಬರೆಯುತ್ತವೆ. ಅಮ್ಮಾವ್ರ ಗಂಡಂದಿರ ಶೋಷಣೆಯನ್ನು ಕೇಳುವವರಿಲ್ಲ. ಯಾಕೆಂದರೆ ಗಂಡಂದಿರ ಗೋಳಿಗೆ ಹಣ ತರಿಸುವ ಶಕ್ತಿ ಇಲ್ಲ! –ಕೆ.ಪ್ರಕಾಶ್, ಚಿಕ್ಕಜೋಗಿಹಳ್ಳಿ

## ಹೆಮ್ಮೆಯ ವಿಚಾರ ಲಹರಿ

ವೈನತೇಯರ 'ಶಿಥಿಲಗೊಳ್ಳುತ್ತಿರುವ ಸಂಬಂಧಗಳು' ಸುಧಾ ಪತ್ರಿಕೆಯ ಹೆಮ್ಮೆಯ ವಿಚಾರ ಲಹರಿ. –ನೆ.ಲ.ರಾಂ, ಬೆಂಗಳೂರು

## ಹಾಂಕಾಂಗ್ ಸಮಗ್ರ ಪರಿಚಯ

ಹಾಂಕಾಂಗ್ ದೇಶದ ಬಗೆಗಿನ ಬಿ.ಎಂ. ಹನೀಫ್‌ರ ಲೇಖನ ಏಷ್ಯಾದ ಅರ್ಥಿಕ ರಾಜಧಾನಿಯ ಪರಿಚಯ ಮಾಡಿಸುವಲ್ಲಿ ಸಫಲವಾಗಿದೆ. ಲೇಖಕರಂತೆ ನಾವೂ ಆ ದೇಶವನ್ನು ಸಿನಿಮಾಗಳಲ್ಲೇ ನೋಡಿದ್ದರೂ, ಈ ಪರಿ ನಿಕಟ ಪರಿಚಯವಾಗಿರಲಿಲ್ಲ.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ/ ಎಚ್.ಆರ್.ದೇಸಾಯಿ, ರಾಯಚೂರು/ ಎಚ್.ಆನಂದಕುಮಾರ್, ಚಿತ್ರದುರ್ಗ

## ದೀಪದ ಕೆಳಗಿನ ಕತ್ತಲೆ!

ಹಾಂಕಾಂಗ್ ಬಗ್ಗೆ ಮತ್ತೊಂದು ಮಾತು; ಪ್ರತಿದಿನ ಹತ್ತಾರು ಮಹಡಿಗಳನ್ನು ಹತ್ತಿ ಮನೆಯೆಂಬ ಗೂಡುಗಳನ್ನು ಸೇರಿದ ಬಳಿಕ ನಾಲ್ಕು ಗೋಡೆಗಳ ಮಧ್ಯೆ ಜೀವಿಸುವ ಜನರ ಬಗ್ಗೆ ಕನಿಕರ ಮಾತ್ರ ಸಾಧ್ಯ. ವರ್ಷಗಟ್ಟಲೆ ಗಾಳಿ, ಬೆಳಕು, ಗಿಡಮರಗಳ ದರ್ಶನವಿಲ್ಲದೆ ಬದುಕುವ ಜೀವಿಗಳ ಬದುಕು ಸುಖಕರವೇ?

–ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

## ವಿರಳ ಲೇಖಕ ಸಿಪಿಕೆ

ಸಿಪಿಕೆ ಚಿತ್ರ ಸಂಪುಟ–ಖುಷಿಯಾಯ್ತು. ಯಾವ ಹಮ್ಮು ಬಿಮ್ಮು ಇಲ್ಲದೆ ಓದುಗರ ಓಲೆ ಬರೆಯುವ ಸಿಪಿಕೆ ನಿಜಕ್ಕೂ ಮಹಾನ್ ವ್ಯಕ್ತಿ. ಅಂಥ ಚುರು(ಟು)ಕು ಪತ್ರದೊಳಗೂ ಓದುಗರಲ್ಲಿ ಸೂಕ್ಷ್ಮಜ್ಞತೆ ಅರಳಿಸುವ ವಿರಳಾತಿ ವಿರಳ ಲೇಖಕ ಅವರು.

–ಹುರುಕಡ್ಲಿ ಶಿಕುಮಾರ, ಬಾಚಿಗೊಂಡನಹಳ್ಳಿ/ ಬಿ.ಪ್ರಶಾಂತ, ಬೆಳ್ತಂಗಡಿ

## ಅಬ್ಬಾ! ಅಬ್ಬಾ!

ಸೂಪರ್ ಮಾಡೆಲ್ ಮಿರಾಂದ ಕೇರ್, ಏನು ಅವಳ ಮೈಮಾಟ? ಅಬ್ಬಾ!
ಅವಳು ಧರಿಸಿದ ಕುಂಚುಕದ ಬೆಲೆ 12 ಕೋಟಿ? ಅಬ್ಬಾ!!

–ವಿಜಯಕುಮಾರ್ ಜೈನ್, ಹರಪನಹಳ್ಳಿ/ ಮೊಳಕಾಲ್ಮುರು ಸುರೇಶ್, ಬಳ್ಳಾರಿ

## ಕ್ರಿಕೆಟ್ ಪ್ರೇಮ

'ಮೇವಾರ ಮಹಾರಾಜರ ಕ್ರಿಕೆಟ್ ಪ್ರೇಮ' ಲೇಖನ ಚೆನ್ನಾಗಿದೆ.

–ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ

## ಮಾತೇ ಮುತ್ತು, ಜ್ಞಾನ ಸಂಪತ್ತು

'ಮಾತೇ, ಮುತ್ತು' ಸೊಗಸಾಗಿರುತ್ತದೆ. 'ಓದಿದರೆ ಮಾತೇ ಮುತ್ತು, ಆಗುವುದು ಜ್ಞಾನ ಸಂಪತ್ತು.' –ನಿತ್ಯ ಎಸ್.ರತ್ನಗಿರಿ, ಮೂಡುಬಿದರೆ

## ಮಿನಿ ಕಥಾ ಪ್ರಶಸ್ತಿ

ಮಿನಿ ಕಥಾ ಬರಹಗಾರರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ 'ಕ್ಷಿತಿಜ ಬೀದರ್ ಮಿನಿ ಕಥಾ ಪ್ರಶಸ್ತಿ' ಆರಂಭಿಸಲಾಗಿದೆ. 2,000ರೂ. ನಗದು ಪ್ರಶಸ್ತಿ ನೀಡಲಾಗುವುದು.

2010ರ ಪ್ರಥಮ ಆವೃತ್ತಿಯಾಗಿದ್ದು ಕನಿಷ್ಠ 70 ಪುಟಗಳಿದ್ದು, ಆಕರ್ಷಕ ಬೈಡಿಂಗ್ ಹೊಂದಿರಬೇಕು. 40 ವರ್ಷ ವಯಸ್ಸಿನೊಳಗಿನ ಕಥೆಗಾರರು ಡಿ. 30ರ ಒಳಗಾಗಿ: ಎಂ.ಜಿ. ದೇಶಪಾಂಡೆ, ಲಕ್ಷ್ಮಿ ನಿಲಯ, ನಂ. 15–3–102 ರಾಂಪೂರೆ ಕಾಲೋನಿ, ಮನ್ನಳ್ಳಿ ರಸ್ತೆ, ಬೀದರ್–585403 –ಈ ವಿಳಾಸಕ್ಕೆ ಕಳುಹಿಸಿ. ವಿವರಕ್ಕೆ: 9844176106–9060574966 ಸಂಪರ್ಕಿಸಿ.

